(ಇಂದು ದಿನಾಂಕಃ **19-08-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ ಎಂ ಟಿ ಎಚ್ ವಕೀಲರಿಂದಃ**

ಪ್ರಕರಣದ ವಾದಿ ನನ್ನ ತಮ್ಮ. ವಾದಿ ಸಲ್ಲಿಸಿದ ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನನ್ನ ಪ್ರತಿವಾದ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಮ್ಮ ಕುಟುಂಬದ ಎಲ್ಲಾ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಲಾಗಿರುತ್ತದೆ. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುವುದಿಲ್ಲ. ಹೆಬ್ಬಳ್ಳಿ ಗ್ರಾಮದ ಜಮೀನು ಸರ್ವೇ ನಂಃ237 ರಲ್ಲಿ ನನ್ನ ತಂದೆಗೆ ಕ್ಷೇತ್ರ 24 ಎಕರೆ ಜಮೀನು ವಿಭಾಗದಲ್ಲಿ ಬಂದಿರುತ್ತದೆ. ಸಾಕ್ಷಿಯು ಮುಂದುವರೆದು ನಾವು ಒಟ್ಟು 3 ಜನ ಸಹೋದರರು ಎಂದು ನುಡಿದಿರುತ್ತಾರೆ. ಸದರಿ ಜಮೀನನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಜಮೀನಿನಲ್ಲಿ ಈಗಾಗಲೇ ಪಾಲು ವಿಭಾಗವಾಗಿದ್ದು, ಸದರಿ ಅಂಶವನ್ನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ. ಸದರಿ ಅಂಶವನ್ನು ನನ್ನ ಪ್ರತಿವಾದ ಪತ್ರದಲ್ಲಿ ಕಾಣಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಅಂಶವನ್ನು ನನ್ನ ಪ್ರತಿವಾದ ಪತ್ರದಲ್ಲಿ ಕಾಣಿಸಿಲ್ಲ ಎಂದರೆ ಸಾಕ್ಷಿಯು ಉತ್ತರಿಸದೇ ಮೌನವಾಗಿ ನಿಂತಿರುತ್ತಾರೆ. ಅದೇ ರೀತಿ ವಾದ ಪತ್ರದಲ್ಲಿ ಸದರಿ ಅಂಶವನ್ನು ಕಾಣಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ನಮ್ಮಹಾಗೂ ವಾದಿಯ ನಡುವೆ ಸಮಪರ್ಕವಾಗಿ ಪಾಲು ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪಾಲು ವಿಭಾಗವಾಗಿದ್ದು, ಅದನ್ನು ವಾದಿ ಕಾಣಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು, ವಾದಿ ಹಾಗೂ 3 ನೇ ಪ್ರತಿವಾದಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರತಿವಾದಿಗಳು ಪರಸ್ಪರ ಮೀಲಾಪಿಯಾಗಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಈಶ್ವರಪ್ಪರವರಿಗೆ ಇಬ್ಬರು ಜನ ಹೆಂಡತಿಯರು ಎಂದರೆ ಸರಿ. ಮೊದಲನೇಯ ಹೆಂಡತಿ ಕಲಾವತಿ ಹಾಗೂ 2 ನೇ ಹೆಂಡತಿ ಕಾಶವ್ವ ಎಂದರೆ ಸರಿ. ಸದರಿ ಕಲಾವತಿಯವರಿಗೆ 3 ಮತ್ತು 5 ನೇ ಪ್ರತಿವಾದಿಯರು ಮಕ್ಕಳು ಎಂದರೆ ಸರಿ. ಅದೇ ರೀತಿ ಕಾಶವ್ವರವರಿಗೆ 4 ಮತ್ತು 6 ನೇ ಪ್ರತಿವಾದಿಯರು ಮಕ್ಕಳಿರುತ್ತಾರೆ ಎಂದರೆ ಸರಿ. ವಾದಿ ತೋರಿಸಿದ ವಂಶಾವಳಿಯಲ್ಲಿ ಕಲಾವತಿಯನ್ನು ತೋರಿಸಿಲ್ಲ ಹಾಗೂ ಈಶ್ವರಪ್ಪ ಮತ್ತು ಕಾಶವ್ವ ರವರಿಗೆ 3 ರಿಂದ 6 ನೇ ಪ್ರತಿವಾದಿಯರು ಮಕ್ಕಳು ಎಂದು ಕಾಣಿಸಲಾಗಿದೆ ಎಂದರೆ ಸರಿ. ವಾದಿಗೆ ಸಹಾಯವಾಗಲು ಸದರಿಯವರು ತೋರಿಸಿದ ವಂಶಾವಳಿ ಸರಿ ಇರುತ್ತದೆ ಎಂದು ನನ್ನ ಪ್ರತಿವಾದಿ ಪತ್ರದಲ್ಲಿ ಸುಳ್ಳಾಗಿ ತೋರಿಸಿರುತ್ತೇನೆ ಎಂದರೆ ಸಾಕ್ಷಿಯು ಉತ್ತರಿಸದೇ ಮೌನವಾಗಿ ನಿಂತಿರುತ್ತಾರೆ. ನಾನು, ವಾದಿ ಹಾಗೂ 3 ನೇ ಪ್ರತಿವಾದಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರತಿವಾದಿಗಳು ಪರಸ್ಪರ ಮೀಲಾಪಿಯಾಗಿ 3 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು

ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.,**
**ನವಲಗುಂದ.**